ಮೂಲ ದಾವಾ ಸಂಖ್ಯೆ. 82/2015 ಡಿ ಡಬ್ಲ್ಯೂ 1

(ದಿನಾಂಕ 08-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಎಂ ಎಸ್ ವಕೀಲರಿಂದಃ-

ಈ ಹಿಂದಿನ ದಿನಾಂಕದಂದು ನಾನು ನ್ಯಾಯಾಲಯದಲ್ಲಿ ನುಡಿದಿರುವ ಸಾಕ್ಷ್ಯದ ಬಗ್ಗೆ ನೆನಪಿದೆ. ನಿಡಿ-1 ರಿಂದ 4 ದಾಖಲೆಯ ಪ್ರಕಾರ ಸರ್ವೆ ಕಾರ್ಯಕ್ಕಾಗಿ ಸರ್ಕಾರಕ್ಕೆ ಹಣ ಪಾವತಿಸಿದ ಬಗ್ಗೆ ಯಾವುದೇ ರಶೀದಿ ನನ್ನ ಬಳಿ ಇಲ್ಲ ಸಾಕ್ಷಿ ಮುಂದುವರೆದು ನಾನು ಅರ್ಜಿ ಕೊಟ್ಟಿದ್ದೆ ಸರ್ವೆಯವರು ಬಂದು ಸರ್ವೆ ಕಾರ್ಯವನ್ನು ಮಾಡಿರುತ್ತಾರೆನ್ನುತ್ತಾರೆ. ಅರ್ಜಿಯನ್ನು ನಾನು ಸರ್ವೆ ಇಲಾಖೆಯವರಿಗೆ ನೀಡಿದ್ದೆ. ನಿಡಿ-4 ರ ನೋಟೀಸಿನಲ್ಲಿ ಸಣ್ಣದುರುಗಪ್ಪ ಅಂತಾ ಇರುವ ಸಹಿ ನನ್ನದೇ ಆಗಿರುತ್ತದೆ. ಸದರಿ ನಿಡಿ-4 ನೋಟೀಸನ್ನು ವಾದಿಗೆ ನೀಡಿರುವುದನ್ನು ನಾನು ಸಹಿ ಮಾಡಿ ಪಡೆದಿದ್ದೇನೆಂದರೆ ಸುಳ್ಳು. ಸರ್ವೆ ಇಲಾಖೆಗೆ ಅರ್ಜಿಯನ್ನು ಏನಂತಾ ಕೊಟ್ಟಿದ್ದೀರಿ ಎಂದರೆ ಸಾಕ್ಷಿಯು ಭೂಮಿ ನಮ್ಮದು ಅಂತಾ ಕೊಟ್ಟಿದ್ದೇನೆ ಎನ್ನುತ್ತಾರೆ. ಆ ಅರ್ಜಿಯ ಸ್ವೀಕೃತಿ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆ ಅರ್ಜಿಯ ಪ್ರತಿ ಬಹಳ ದಿನಗಳಾಗಿರುವುದರಿಂದ ನನ್ನ ಬಳಿ ಇಲ್ಲ. ನಾನು ಆ ರೀತಿ ಯಾವುದೇ ಅರ್ಜಿಯನ್ನು ಸರ್ವೆ ಇಲಾಖೆಗೆ ನೀಡಿಲ್ಲ ಆದ್ದರಿಂದ ನನ್ನ ಬಳಿ ಸದರಿ ಅರ್ಜಿಯ ಸ್ವೀಕೃತಿ ಪ್ರತಿ ಮತ್ತು ಹಣ ಕಟ್ಟಿದ ಬಗ್ಗೆ ಯಾವುದೇ ರಶೀದಿ ಇಲ್ಲವೆಂದರೆ ಸರಿಯಲ್ಲ. ನಾನು ಹೇಳುವ ಹಾಗೆ ಸರ್ವೆ ಇಲಾಖೆಯವರಾಗಲೀ ಕಂದಾಯ ನಿರೀಕ್ಷಕರಾಗಲೀ ಸ್ಥಳಕ್ಕೆ ಬಂದಿಲ್ಲವೆಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಗ್ರಾಮ ಲೆಕ್ಕಾಧಿಕಾರಿಗಳು ಮತ್ತು ಕಂದಾಯ ನಿರೀಕ್ಷಕರ ಸಹಿ ಇಲ್ಲವೆಂದರೆ ಸಾಕ್ಷಿಯು ಆ ದಾಖಲೆಗಳನ್ನು ಬರೆದಿಲ್ಲವೆನ್ನುತ್ತಾರೆ. ನಾನು ಹಾಜರುಪಡಿಸಿದ ನಿಡಿ-2 ದಾಖಲೆಯಲ್ಲಿ ತಹಶೀಲ್ದಾರ್ ಅಥವಾ ಎ ಡಿ ಎಲ್ ಆರ್ ರವರ ಆದೇಶ ಮತ್ತು ನಂಬರ್ ಸಹಾ ನಮೂದು ಇಲ್ಲವೆಂದರೆ ಸರಿಯಲ್ಲ. ನಿಡಿ-1 ರಿಂದ 4 ದಾಖಲೆಗಳ ಸಂಪೂರ್ಣ ಕಡತವನ್ನು ಪಡೆಯಲು ವಾದಿಯು ತಹಶೀಲ್ದಾರ್ ಮತ್ತು ಎ ಡಿ ಎಲ್ ಆರ್ ಇವರ ಬಳಿ ನಿಪಿ-26 ರಂತೆ ಅರ್ಜಿ ಸಲ್ಲಿಸಿದ್ದು ಅದಕ್ಕೆ ಸದರಿಯವರು ನಮ್ಮ ಕಾರ್ಯಾಲಯದಲ್ಲಿ ಆ ಕಡತ ಲಭ್ಯವಿಲ್ಲ ಅಂತಾ ನಿಪಿ-27 ರಂತೆ ಹಿಂಬರಹವನ್ನು ವಾದಿಗೆ ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಾನು ಯಾವುದೇ ಅರ್ಜಿಯನ್ನು ನೀಡಿಲ್ಲ ಯಾವುದೇ ಶುಲ್ಕವನ್ನು ಪಾವತಿಸಿಲ್ಲವಾದ್ದರಿಂದ ಯಾವುದೇ ಸರ್ವೆ ಕಾರ್ಯ ನೆರವೇರಿರುವುದಿಲ್ಲ ಆದ್ದರಿಂದ ಮೇಲ್ಕಂಡ ಇಲಾಖೆಯಲ್ಲಿ ದಾಖಲೆ ಲಭ್ಯವಿಲ್ಲ ಅಂತಾ ಹಿಂಬರಹ ನೀಡಿರುತ್ತಾರೆಂದರೆ ಸರಿಯಲ್ಲ. ನಿಡಿ-1 ರಿಂದ 4 ದಾಖಲೆಗಳನ್ನು ನಾನು ಸೃಷ್ಟಿ ಮಾಡಿರುವಂತಹ ದಾಖಲೆಗಳಾಗಿರುತ್ತವೆಂದರೆ ಸರಿಯಲ್ಲ.

ನಿಡಿ-13 ದಾಖಲೆಯಲ್ಲಿ ಯಾವ ದಿನಾಂಕದಂದು ಸರ್ವೆ ದಿನಾಂಕಕ್ಕೆ ಅರ್ಜಿ ನೀಡಿರುತ್ತಾರೆ ಮತ್ತು ಯಾವ ದಿನಾಂಕಕ್ಕೆ ಸರ್ವೆಯಾಯಿತು ಎಂದು ನಮೂದು ಇಲ್ಲವೆಂದರೆ ಸರಿ. ಈ ದಾಖಲೆಯನ್ನು ಸಹಾ ನಾನು ಸೃಷ್ಟಿ ಮಾಡಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ನಿಡಿ-13 ಸರ್ವೆ ಕಾರ್ಯಕ್ಕಾಗಿ ನೀಡಿರುವಂತಹ ಅರ್ಜಿ ಮತ್ತು ಅದಕ್ಕೆ ಪಾವತಿಸಿದ ಶುಲ್ಕ ಹಾಗೂ ಸರ್ವೆ ನೋಟೀಸಿನ ಪ್ರತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆ ರೀತಿ ದಾಖಲೆಗಳು ನನ್ನ ಬಳಿ ಇಲ್ಲ. ನಿಡಿ-28 ರಿಂದ 37 ದಾಖಲೆಗಳಿಗೂ ದಾವಾಸ್ತಿಗೂ ಯಾವುದೇ ಸಂಬಂಧವಿಲ್ಲವೆಂದರೆ ಸರಿಯಲ್ಲ.

ಮಾನ್ಯ ಹಿರಿಯ ಸಿವಿಲ್ ಜಡ್ಜ ನ್ಯಾಯಾಲಯದಲ್ಲಿ ಎಂ ಎ ನಂ.22/2018 ರಂತೆ ನಮ್ಮ ವಿರುದ್ಧ ತಡೆಯಾಜ್ಞೆ ಆದೇಶವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಆದೇಶವಾಗಿದ್ದರೂ ಸಹಾ ನಾನು ವಾದಿಯ ಸ್ವಾಧೀನಕ್ಕೆ ತೊಂದರೆ ಕೊಡುತ್ತಾ ಬಂದಿರುತ್ತೇನೆಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ದಾವಾಸ್ತಿಯ ಸ್ವಾಧೀನದಲ್ಲಿ ಹಿಂದೆ ಸಹಾ ನಾವೇ ಇದ್ದು ಈಗಲೂ ಸಹಾ ನಾವೇ ಇರುತ್ತೇವೆನ್ನುತ್ತಾರೆ.

ಡಿಡಬ್ಲ್ಯೂ:2 ರಿಂದ 6 ರವರು ನಮ್ಮ ಗ್ರಾಮದವರು ಎಂದರೆ ಸರಿ ಸಾಕ್ಷಿ ಮುಂದುವರೆದು ಅವರು ನಮ್ಮ ಜಮೀನಿನ ಅಕ್ಕಪಕ್ಕದವರು ಎನ್ನುತ್ತಾರೆ. ಅವರೆಲ್ಲರೂ ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ನಾನು ಕಾಂಗ್ರೆಸ್ ಪಕ್ಷದ ಮುಖಂಡ ಎಂದರೆ ಸರಿ. ಸದರಿಯವರೆಲ್ಲರೂ ನಮ್ಮ ಪಕ್ಷದವರೇ ಎಂದರೆ ಸರಿಯಲ್ಲ. ನನ್ನ ಮಾತನ್ನು ಕೇಳಿ ನನಗೆ ಸಹಾಯ ಮಾಡಲು ಅವರೆಲ್ಲರೂ ನನ್ನ ಪರವಾಗಿ ಸುಳ್ಳು ಸಾಕ್ಷ್ಯ ಪ್ರಮಾಣಪತ್ರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆಂದರೆ ಸರಿಯಲ್ಲ.

ನಿಡಿ-15 ವಂಶವೃಕ್ಷವನ್ನು ನಾನೇ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಿಡಿ-15 ರಲ್ಲಿ ನಾನೇ ಹೇಳಿದಂತೆ ಕುರುಬರ ಕೋರಪ್ಪ ಮತ್ತು ಕುರುಬರ ಸಕ್ರಮ್ಮ ನನ್ನ ಅಜ್ಜ ಅಜ್ಜಿ ಎಂದರೆ ಸರಿ. ಸದರಿಯವರಿಗೆ ಕುರುಬರ ದುರುಗಪ್ಪ ಮತ್ತು ಬೈಲಪ್ಪ ಮಕ್ಕಳು ಎಂದರೆ ಸರಿ. ಕುರುಬರ ದುರುಗಪ್ಪನ ಹೆಂಡತಿ ಗಂಗಮ್ಮ ಎಂದರೆ ಸರಿ. ನನ್ನ ತಂದೆ ಹೆಸರು ಬೈಲಪ್ಪ ಎಂದರೆ ಸರಿ. ಸದರಿ ಗಂಗಮ್ಮ ಮತ್ತು ಬೈಲಪ್ಪ ದಾವಾಸ್ತಿಯನ್ನು ಪೋಲೀಸ್ ಭೀಮನಗೌಡ ಇವರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿ. ಸದರಿ ಪೋಲೀಸ್ ಭೀಮನಗೌಡರಿಂದ ದಾವಾಸ್ತಿಯನ್ನು ವಾದಿಯ ದೊಡ್ಡಪ್ಪ ಚಿತ್ರಗಾರ ರಾಮಣ್ಣ ಇವರು ಖರೀದಿಸಿರುತ್ತಾರೆಂದರೆ ಸಾಕ್ಷಿಯು ಇರಬಹುದು ಆದರೆ ನಮ್ಮ ಜಮೀನಿನ ಮ್ಯುಟೇಶನ್ ವಾದಿಯು ಮಾಡಿಸಿಕೊಂಡಿರುತ್ತಾರೆನ್ನುತ್ತಾರೆ. ಅದರಂತೆ ನಿಪಿ-15

ನಲ್ಲಿ ನಮೂದು ಸಹಾ ಆಗಿರುತ್ತದೆಂದರೆ ಸರಿಯಲ್ಲ. ಪಹಣಿಗಳನ್ನು ನೋಡಿಕೊಂಡು ದಾವಾಸ್ತಿ ನಮ್ಮದು ಅಂತಾ ನಾವು ಹೇಳುತ್ತಿದ್ದೇವೆಂದರೆ ಸರಿಯಲ್ಲ. ದಾವಾಸ್ತಿಗೂ ನಮಗೂ ಯಾವುದೇ ಸಂಬಂಧವಿಲ್ಲ ನಾನು ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ